ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**

**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

**ಸಂಖ್ಯೆ: ಕವಿಪ್ರನಿನಿ/ಬಿ5ಎ/18261/2015-16/1** **ದಿನಾಂಕ: 12.04.2024**

ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾ.ಸಂ.),
ಬೆವಿಸಕಂ/ಮವಿಸಕಂ/ಹುವಿ.ಸ.ಕಂ./ಗುವಿಸಕಂ/ಚಾ.ವಿ.ಸ.ನಿ.ನಿ.,
ಬೆಂಗಳೂರು/ಮಂಗಳೂರು/ಹುಬ್ಬಳ್ಳಿ/ಕಲಬುರಗಿ/ಮೈಸೂರು.

ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ, ಕವಿಪ್ರನಿನಿ,
ಬೆಂಗಳೂರು/ಮೈಸೂರು/ತುಮಕೂರು/ಹಾಸನ/ಬಾಗಲಕೋಟೆ/ಕಲಬುರಗಿ.

ಮುಖ್ಯ ಇಂಜಿನಿಯರ್(ವಿ),
ಎಸ್.ಎಲ್.ಡಿ.ಸಿ., ಕವಿಪ್ರನಿನಿ,
ಬೆಂಗಳೂರು.

ಆರ್ಥಿಕ ಸಲಹೆಗಾರರು(ಲೆಕ್ಕಗಳು ಮತ್ತು ಸಂಪನ್ಮೂಲ),
ಕವಿಪ್ರನಿನಿ, ಕಾವೇರಿ ಭವನ,
ಬೆಂಗಳೂರು.

ಮಾನ್ಯರೆ,

**ವಿಷಯ:** ದಿನಾಂಕ; 31.03.2024 ರಂದು ಇರುವಂತೆ ಕವಿಪ್ರನಿನಿ ಮತ್ತು ವಿ.ಸ.ಕಂ.ಗಳಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:**
1. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ5ಎ/18261/ 2015-16/1, ದಿನಾಂಕ:17.07.2023.
2. ನಿಗಮದ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ85/6334/2014-15 ದಿನಾಂಕ;13.03.2024.

------

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ದಿನಾಂಕ:31.03.2024 ರ ಅಂತ್ಯಕ್ಕೆ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳ ಅಧಿಸೂಚನೆಯನ್ನು ಕವಿಪ್ರನಿನಿಯು ಪ್ರಕಟಿಸಬೇಕಿದ್ದು, ಪ್ರತೀ ವರ್ಷವೂ ನಿಮ್ಮ ಕಛೇರಿಯು ಸಲ್ಲಿಸುತ್ತಿರುವಂತೆ ನಿಮ್ಮ ವಿದ್ಯುತ್ ಸರಬರಾಜು ಕಂಪನಿಯ/ಕವಿಪ್ರನಿನಿ ಪ್ರಸರಣ ವಲಯದ/ನಿಮ್ಮ ಕಾರ್ಯವ್ಯಾಪ್ತಿಯ ಕಛೇರಿಗಳಲ್ಲಿ ದಿನಾಂಕ: 31.03.2024 ರ ಅಂತ್ಯಕ್ಕೆ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳನ್ನು ವಿಳಂಬ ಮಾಡದೆ, ಉಲ್ಲೇಖ-1 ರ ನಿಗಮದ ಅಧಿಸೂಚನೆಯ ನಮೂನೆಯಲ್ಲಿ (ಕವಿಪ್ರನಿನಿಯ ವೆಬ್ ಸೈಟಿನಲ್ಲಿ ಪ್ರಕಟಿಸಲಾಗಿದೆ) ದಿನಾಂಕ; 30.04.2024 ರೊಳಗಾಗಿ ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ತಪ್ಪದೇ ಸಲ್ಲಿಸಲು ಕೋರಿದೆ.

ಮುಂದುವರೆದು, ಮೇಲೆ ತಿಳಿಸಿದ ಮಾಹಿತಿಗಳನ್ನು ಸಲ್ಲಿಸುವಾಗ ಉಲ್ಲೇಖ-1 ರ ಪತ್ರದಲ್ಲಿ ಈಗಾಗಲೇ ಸೂಚಿಸಿರುವಂತೆ, ಕವಿಪ್ರನಿನಿಯ ಜಾಲತಾಣದಲ್ಲಿ ವೇತನ ಬಟವಾಡೆ ಅಧಿಕಾರಿಗಳು ನಮೂದಿಸುತ್ತಿರುವ ಸಿಬ್ಬಂದಿಯ ದತ್ತಾಂಶಗಳಿಗೆ ಹೊಂದಾಣಿಕೆ ಆಗಿರುವುದನ್ನು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳುವುದು. ಹಿಂದಿನ ಆರ್ಥಿಕ ವರ್ಷಾಂತ್ಯಕ್ಕೆ ಸಲ್ಲಿಸಲಾಗಿದ್ದ ಸಿಬ್ಬಂದಿಯ ಮಾಹಿತಿಗಳು/ಅಂಕಿ ಅಂಶಗಳು ಮತ್ತು ಜಾಲತಾಣದಲ್ಲಿ ನಮೂದಿಸಲಾಗಿದ್ದ ದತ್ತಾಂಶಗಳು ಹೊಂದಾಣಿಕೆ ಆಗದಿರುವುದನ್ನು/ ಸಮನ್ವಯಗೊಳಿಸದೇ ಸಲ್ಲಿಸುವುದನ್ನು ನಿಗಮವು ಗಮನಿಸಿದೆ.

ನಿಗಮದಿಂದ ಸರ್ಕಾರದ ವಿವಿಧ ಇಲಾಖೆಗಳಿಗೆ, ಆಯೋಗಗಳಿಗೆ, ಸಭೆಗಳಿಗೆ, ವಿಧಾನ ಮಂಡಲದ ಸದಸ್ಯರಿಗೆ ಮತ್ತು ಇತರೆ ಪ್ರಾಧಿಕಾರಗಳಿಗೆ ತಹಲ್‌ನವರೆಗೆ ಸಿದ್ಧಪಡಿಸಿದ (ಅಪ್-ಡೇಟ್) ಮಾಹಿತಿಗಳನ್ನು ಪದೇ ಪದೇ ಸಲ್ಲಿಸಬೇಕಿದ್ದು, ಮೇಲೆ ತಿಳಿಸಿದ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಆಧ್ಯತೆಯ ಮೇರೆಗೆ ನಿಗದಿಪಡಿಸಿದ ದಿನಾಂಕದೊಳಗಾಗಿ ಮಾಹಿತಿಗಳನ್ನು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ತಪ್ಪದೇ ಸಲ್ಲಿಸಲು ಕೋರಲಾಗಿದೆ.

ನಿಮ್ಮ ವಿಶ್ವಾಸಿ,

ಉಪ ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ),
ಕವಿಪ್ರನಿನಿ.

ಪ್ರತಿಯನ್ನು ಮಾಹಿತಿಗಾಗಿ:
ವ್ಯವಸ್ಥಾಪಕರು(ಆಂತರಿಕ ನಿರ್ವಹಣೆ), ನಿಗಮ ಕಾರ್ಯಾಲಯ, ಕವಿಪ್ರನಿನಿ ರವರು ಮೇಲಿನ ಸೂಚನೆಗಳನ್ನು ತಪ್ಪದೇ ಪಾಲಿಸಲು ಸೂಚಿಸಿದೆ.